## ಫ್ರಾನ್ಸಿಸ್‌ನ ದರ್ಶನಗಳು ಮತ್ತು ಪವಾಡಗಳು

೧೨೨೩ರ ಕ್ರಿಸ್‌ಮಸ್ ಸಮಯ. ಪ್ರಭು ಏಸುವು ಬೆತ್ಲಹೆಮ್‌ನ ಕೊಟ್ಟಿಗೆಯಲ್ಲಿ ಜನ್ಮತಾಳಿದ್ದನ್ನು ಇಟಲಿಯ ಗ್ರೆಸ್ಸಿಯೊ ಎಂಬ ಊರಿನ ಒಂದು ಚರ್ಚಿನಲ್ಲಿ ಬೊಂಬೆಗಳ ರೂಪದಲ್ಲಿ ಫ್ರಾನ್ಸಿಸ್ ಪ್ರದರ್ಶಿಸಿದನು. ಅದರಲ್ಲಿ ಪ್ರಭು ಏಸುಕ್ರಿಸ್ತನ ಜನ್ಮಧಾರಣೆಯನ್ನು ಪ್ರತಿಕೃತಿಗಳ ಮೂಲಕ ಕಲಾತ್ಮಕವಾಗಿ ಬಿಂಬಿಸಿದನು. ಹೀಗೆ ಫ್ರಾನ್ಸಿಸ್ ಯೇಸುಕ್ರಿಸ್ತನ ದಿವ್ಯರೂಪವನ್ನು ಮಾತ್ರವಲ್ಲ, ಮಾನವೀಯ ರೂಪವನ್ನೂ ಗೌರವಿಸಿದನು.

ಮರುವರ್ಷ, ಅಂದರೆ ೧೨೨೪ರಲ್ಲಿ ಲಾ ವರ್ನಾ ಎಂಬ ಪರ್ವತ ಪ್ರದೇಶದಲ್ಲಿ ಏಕಾಂತವಾಗಿರಲು ಫ್ರಾನ್ಸಿಸ್ ತೆರಳಿದನು. ಅಲ್ಲಿ ಕನ್ಯೆ ಮೇರಿಯ ಉತ್ಸವ (ಆಗಸ್ಟ್ ೧೫) ಮತ್ತು ಸಂತ ಮೈಕಲ್ ಮಾಸ್ ದಿನ (ಸೆಪ್ಟೆಂಬರ್ ೨೯) – ಈ ಎರಡು ದಿನಗಳನ್ನು ಕೊಂಡಾಡಲು ಸುಮಾರು ನಲುವತ್ತು ದಿನಗಳ ಕಾಲ ಫ್ರಾನ್ಸಿಸ್ ಘೋರ ತಪಸ್ಸನ್ನು ಕೈಗೊಂಡನು. ಆ ಸಮಯದಲ್ಲಿ ಅವನು ಉಪವಾಸವನ್ನು ಆಚರಿಸಿದನು. ತನ್ನ ವ್ರತಾಚರಣೆಯ ಸಂದರ್ಭದಲ್ಲಿ ಅವನು ಉತ್ಕಟವಾಗಿ ಪ್ರಾರ್ಥಿಸಿದನು. ತಾನು ಭಗವಂತನನ್ನು ತುಷ್ಟಿಗೊಳಿಸಲು ಕೈಗೊಳ್ಳಬೇಕಾದ ಉತ್ತಮ ವಿಧಾನ ಅದಾವುದೆಂದು ಅನವರತವೂ ಆಲೋಚಿಸಿದನು. ಅದಕ್ಕಾಗಿ ಬೈಬಲ್ ಪುಣ್ಯಗ್ರಂಥದಲ್ಲಿ ಇರುವ ಏಸುಕ್ರಿಸ್ತನ ಶಿಷ್ಯರ ಸುವಾರ್ತೆಗಳನ್ನು ಮತ್ತೆ ಮತ್ತೆ ತಿರುವಿ ಹಾಕಿದನು. ಅವುಗಳಲ್ಲಿ, ಪ್ರಮುಖವಾಗಿ ಮೂರು ಕಡೆಗಳಲ್ಲಿ, 'ಏಸುಕ್ರಿಸ್ತನ ಆವೇಗ' (Passion of Christ)' ದ ಬಗ್ಗೆ ಉಲ್ಲೇಖವಿರುವುದನ್ನು ಕಂಡುಕೊಂಡನು. ಸೆಪ್ಟೆಂಬರ್ ೧೪ ಒಂದು ಪುಣ್ಯದಿನ. ಅದನ್ನು 'ಶಿಲುಬೆಯ ಆರಾಧನೆಯ ದಿನ' ವೆಂದು ಕ್ರೈಸ್ತರು ಆಚರಿಸುತ್ತಾರೆ. ಅಂದಿನ ದಿನ ಪ್ರಾತಃಕಾಲದಲ್ಲಿ ಫ್ರಾನ್ಸಿಸ್ ಪ್ರಾರ್ಥನೆಯಲ್ಲಿ ಮಗ್ನನಾಗಿದ್ದನು. ಆ ಸಮಯದಲ್ಲಿ ದಿವ್ಯಾಕೃತಿಯೊಂದು ಆಕಾಶದಿಂದ ಕೆಳಗಿಳಿದು ಬರುವುದನ್ನು ಅವನು ಕಣ್ಣಾರೆ ಕಂಡನು. ಸಂತ ಬೊನಾ ವೆನ್‌ಟ್ಯೂರ್ ಎಂಬುವವನು ಫ್ರಾನ್ಸಿಸ್‌ನ ಸಂನ್ಯಾಸಿ ಪಂಗಡದ ಮುಖ್ಯಸ್ಥನಾಗಿದ್ದನು. ಅವನು ೧೩ನೆಯ ಶತಮಾನದ ಮೇರು ಚಿಂತಕ ಎಂದು ಹೆಸರಾಗಿದ್ದಾನೆ. ಅವನು ಹೀಗೆ ಬರೆಯುತ್ತಾನೆ:

ಆ ದಿವ್ಯಾಕೃತಿಯು ಅವನ ಮುಂದೆ ಉನ್ನತ ಆಕಾಶ ಪ್ರದೇಶದಲ್ಲಿ ನಿಂತುಕೊಂಡಿತು. ದೇವದೂತನಾಗಿದ್ದರೂ ಮಾನವ ರೂಪವನ್ನು ಹೊಂದಿತ್ತು. ಆರು ರೆಕ್ಕೆಗಳನ್ನು ಹೊಂದಿತ್ತು. ಅದರ ಭುಜಗಳು ನೀಳವಾಗಿದ್ದವು. ಕಾಲುಗಳು ಕೂಡಿಕೊಂಡಿದ್ದವು. ಇಡೀ ಶರೀರವು ಶಿಲುಬೆಗೆ ಆತುಕೊಂಡಿತ್ತು. ಎರಡು ರೆಕ್ಕೆಗಳು ಮೇಲಕ್ಕೆ ಚಾಚಿದ್ದರೆ, ಮತ್ತೆರಡು ಹಾರುವಾಗ ಇರುವಂತೆ ಬದಿಯಲ್ಲಿ ಚಾಚಿಕೊಂಡಿದ್ದವು. ಉಳಿದೆರಡು ರೆಕ್ಕೆಗಳು ಇಡೀ ಶರೀರವನ್ನು ಆವರಿಸಿದ್ದವು. ಮುಖವು ಬಹು ಮನೋಹರ ಸೌಂದರ್ಯದಿಂದ ಕೂಡಿತ್ತು. ಈ ದೇವದೂತನು ಫ್ರಾನ್ಸಿಸ್ ಕಡೆಗೆ ಪ್ರೇಮದೃಷ್ಟಿಯನ್ನು ಬೀರಿ, ಮೃದು ಭಾವದಿಂದ ಮುಗುಳ್ನಕ್ಕನು. ಫ್ರಾನ್ಸಿಸ್‌ನ ಮನಸ್ಸಿನಲ್ಲಿ ದ್ವಂದ್ವಭಾವಗಳೆದ್ದು, ಅವನ ಹೃದಯ ತುಂಬಿಬಂತು. ಒಂದು ಕಡೆ ಈ ದರ್ಶನವು ಆನಂದದ ಭಾವನೆಯನ್ನು ಉತ್ತೇಜಿಸಿತು; ಇನ್ನೊಂದು ಕಡೆ ಶಿಲುಬೆಗೆ ಏರಿರುವ ಈ ದಿವ್ಯ ದೇವದೂತನ ಸಂಕಟವನ್ನು ಕಂಡು ಫ್ರಾನ್ಸಿಸ್‌ನ ಮನಸ್ಸು ತಲ್ಲಣಿಸಿತು; ಅತೀವ ದುಃಖವನ್ನು ಉಂಟುಮಾಡಿತು. ಈ ದರ್ಶನದ ಉದ್ದೇಶವು ಏನಿರಬಹುದೆಂದು ಅವನು ಚಿಂತಿಸಿದನು. ಕಡೆಗೆ ಕ್ರೈಸ್ತನಂತೆಯೇ ತಾನು ಕೂಡ ಶಿಲುಬೆಯನ್ನಪ್ಪಿಕೊಳ್ಳುವುದೇ ತನ್ನ ಹಣೆಯಲ್ಲಿ ಬರೆದಿದೆ ಎಂದು ತಿಳಿದುಕೊಂಡನು. ಆದರೆ ಇದು ಭೌತಿಕ ಶಿಲುಬೆಯಾಗಿರಲಿಲ್ಲ. ಅದಕ್ಕೆ ಬದಲಾಗಿ ಮನಸ್ಸು ಮತ್ತು ಹೃದಯಗಳಲ್ಲಿ ಕ್ರೈಸ್ತನ ಈ ಸಂಕಟದಲ್ಲಿ ಐಕ್ಯಮತ್ಯವನ್ನು ಪಡೆಯುವುದಾಗಿತ್ತು. ಕ್ರಮೇಣ ಈ ಅಪೂರ್ವ ದೃಶ್ಯವು ಮಾಸಿಹೋಯಿತು. ಆದರೆ ಇದು ಫ್ರಾನ್ಸಿಸ್‌ನ ಅಂತರಂಗದಲ್ಲಿ ದಿವ್ಯ ಭಗವತ್‌ಪ್ರೇಮದ ವರ್ಣನಾತೀತ ಸೌರಭವನ್ನು ಬಿಟ್ಟುಹೋಯಿತು. ಅದೇ ಬಾಹ್ಯದಲ್ಲಿ ಶಿಲುಬೆಯಿಂದ ಕ್ರೈಸ್ತನಿಗಾಗಿ ಗಾಯದ ಗುರುತುಗಳು (stigmata) ಫ್ರಾನ್ಸಿಸ್‌ನ ದೇಹದಲ್ಲಿಯೂ ಮೂಡುವಂತೆ ಮಾಡಿತು.

## ಸಂತನ ಅಂತ್ಯ


ಈ ಗಾಯದ ಗುರುತುಗಳನ್ನು ಇತರರಿಂದ ಮುಚ್ಚಿಡುವುದಕ್ಕೆ ಫ್ರಾನ್ಸಿಸ್ ಇನ್ನಿಲ್ಲದ ಪ್ರಯತ್ನವನ್ನು ಮಾಡಿದ. ಅದರಲ್ಲಿ ಬಹುಮಟ್ಟಿಗೆ ಸಫಲನೂ ಆದ. ಹಲವಾರು ಊರುಗಳಲ್ಲಿ ಅವನ ನೋವಿಗೆ ಉಪಶಮನ ನೀಡುವುದಕ್ಕೆ ಔಷಧೋಪಚಾರಗಳೂ ಆದವು. ಆದರೆ ಅವುಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ. ಕಡೆಗೆ ತಾನು ಸಂನ್ಯಾಸಿ ಪಂಥ ಹುಟ್ಟುಹಾಕಿದ್ದ ಸ್ಥಳವಾದ ಪೋರ್ಟಿಯುನ್ ಕುಲ ಚರ್ಚ್‌ಗೆ ಹತ್ತಿರದ ಗುಡಿಸಿಲಿಗೆ ಅವನನ್ನು ಸಾಗಿಸಲಾಯಿತು. ಅವನ ಆಧ್ಯಾತ್ಮಿಕ ಪ್ರಚಾರ ಕಾರ್ಯ ಆರಂಭವಾಗಿದ್ದು ಇಲ್ಲೇ; ಅದು ಅಂತ್ಯಕೊಂಡಿದ್ದೂ ಇಲ್ಲೇ. ಕಡೆಯ ಕಾಲ ಸಮೀಪಿಸುತ್ತಿರುವುದನ್ನು ಅರಿತ ಫ್ರಾನ್ಸಿಸ್ ತನ್ನ ಆಧ್ಯಾತ್ಮಿಕ ಸಂದೇಶವನ್ನು ಹೇಳಿ ಬರೆಯಿಸಲು ಆರಂಭಿಸಿದ. ಕಡೆಗೆ 'ಸಹೋದರಿ ಮೃತ್ಯುವು' ಈ ಮಹಾತ್ಮನನ್ನು ೧೨೨೬ರ ಅಕ್ಟೋಬರ್ ೩, ಶನಿವಾರದ ಸಂಜೆಯ ಹೊತ್ತಿಗೆ ಅಪ್ಪಿಕೊಂಡಳು. ಬೈಬಲ್ಲಿನ ಪ್ರಾರ್ಥನಾಪದ್ಯಗಳನ್ನು ಆಲಿಸುತ್ತ ಫ್ರಾನ್ಸಿಸ್ ಶಾಂತವಾಗಿ ಕೊನೆಯುಸಿರನ್ನೆಳೆದ. ಫ್ರಾನ್ಸಿಸ್‌ನ ಮರಣಾನಂತರ ಅವನಿಗೆ ಪರಮ ಆಪ್ತನಾಗಿದ್ದ ಸಹೋದರ ಎಲಿಯಾಸ್ ಎನ್ನುವವನು ಒಂದು ಲಿಖಿತ ನಿವೇದನೆಯನ್ನು ಮಾಡುತ್ತಾನೆ. ಅದರಲ್ಲಿ, ''ಈ ಸಂತನ ಮೃತದೇಹವು, ಶಿಲುಬೆಗೇರಿಸಿ, ಆಗತಾನೇ ತೆಗೆದ ಕಳೇಬರದಂತೆ ಇದ್ದಿತು'' ಎಂದು ಅವನು ಹೇಳುತ್ತಾನೆ.

ಪೋಪ್ ಧರ್ಮಗುರು ಒಂಬತ್ತನೆಯ ಗ್ರೆಗೊರಿ ಅವನನ್ನು 'ಸಂತ'ನೆಂದು ಅಧಿಕೃತವಾಗಿ ೧೨೨೮ರ ಜುಲೈ ೧೬ರಂದು ಘೋಷಿಸಿದ. ಮರುದಿನ, ಅವನೇ ಅಸಿಸ್ಸಿಯಲ್ಲಿ ಸಂತ ಫ್ರಾನ್ಸಿಸ್ ಸ್ಮರಣಾರ್ಥ ಪ್ರಾರ್ಥನಾ ಮಂದಿರದ ಶಂಕುಸ್ಥಾಪನೆಯನ್ನೂ ನೆರವೇರಿಸಿದ. ಆ ಸ್ಥಳದಲ್ಲಿ ೧೨೩೦ರ ಮೇ ೨೫ರಂದು ಸಮಾಧಿಪೀಠವನ್ನು ರಚಿಸಲಾಯಿತು. ಆದರೆ ಶತ್ರುಗಳ ಭಯದಿಂದ ಅದನ್ನು ರಹಸ್ಯವಾಗಿ ಇರಿಸಲಾಯಿತು. ೧೮೧೮ರಲ್ಲಿ ಫ್ರಾನ್ಸಿಸ್‌ನ ಮೂಲ ಸಮಾಧಿಸ್ಥಾನವನ್ನು ಕಂಡುಹಿಡಿಯಲಾಯಿತು. ಅದರ ಮೇಲೆ ಭವ್ಯ ಮಂದಿರವನ್ನು ನಿರ್ಮಿಸಲಾಯಿತು. *(ಸಮಾಪ್ತಿ)*

# ಅಸುರರ ಗುರು ಶುಕ್ರಾಚಾರ್ಯ

**ಕಥೆ:** ಕೆ ಸಂತಾನರಾಮನ್ **ಚಿತ್ರ:** ಶಂಕರ್

**1** ಶಿವದೇವಾಲಯವೊಂದರಲ್ಲಿ ಶಿವನ ಮುಂದೆ ಉರಿಸಿದ್ದ ದೀಪ ಆರಿ ಹೋಗುವುದರಲ್ಲಿತ್ತು.
ಆಗ ಅಲ್ಲಿಗೆ ಒಂದು ಇಲಿ ಬಂತು ...





**2** ಇಲಿ ದೀಪದ ಬತ್ತಿಗೆ ಮೂಗು ತಗುಲಿಸಿದಾಗ, ದೀಪ ಚೆನ್ನಾಗಿ ಬೆಳಗಿತು.




**3**





4 ಇಲಿಯು ಮುಂದಿನ ಜನ್ಮದಲ್ಲಿ ಅಸುರರ ರಾಜನಾದ ಮಹಾಬಲಿಯಾಗಿ ಜನ್ಮವೆತ್ತಿ ಮೆರೆದಾಡಿತು. ಒಂದು ದಿನ ಮಹಾಬಲಿ ತನ್ನ ಗುರು ಶುಕ್ರಾಚಾರ್ಯನಿಗೆ ಹೇಳಿದ ....




5 ಮಹಾಬಲಿಯು ದೊಡ್ಡ ಯಾಗವನ್ನು ಮಾಡಿದ. ಯಾಗದಲ್ಲಿ ಭಾಗವಹಿಸಿದವರಿಗೆಲ್ಲ ಅವನು ಅನೇಕ ಉಡುಗೊರೆಗಳನ್ನು ನೀಡಿದ.

6 ಆಗ ಮಹಾವಿಷ್ಣು ವಾಮನನ ರೂಪದಲ್ಲಿ ಯಾಗಶಾಲೆಯನ್ನು ಪ್ರವೇಶಿಸಿದ.






8 ನೀರೆರೆದುಭೂಮಿಯನ್ನು ದಾನ ಮಾಡಲು ಮಹಾಬಲಿ ಕಮಂಡಲವನ್ನು ಎತ್ತಿದ.

